ಎಂ ವಿ ಸಿ ನಂಃ 184/2025
ಪಿ ಡಬ್ಲ್ಯುಃ 1

<u>ದಿನಾಂಕಃ**06-12-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಪಾಟೀ ಸವಾಲುಃ **2** ನೇ ಎದುರುದಾರರ ಪರ ಶ್ರೀಮತಿ ಎಸ್ ಬಿ**.**ವಕೀಲರಿಂದಃ</u>

ನಾನು ಕೂಲಿ ಕೆಲಸ ಮಾಡುತ್ತಾ ಇರುತ್ತೇನೆ. ನನಗೆ 2 ನೇ ಎದುರುದಾರರ 1 ನೇ ಎದುರುದಾರರ ಮುಖಾಂತರ ಪರಿಚಯ ಇರುತ್ತಾರೆ. 1 ನೇ ಎದುರುದಾರರ ಊರು ಗುಣವಂತೆ ಗ್ರಾಮ, ನಮ್ಮ ಊರು ಬಿ ಜಿ ಕಟ್ಟೆ ಇರುತ್ತದೆ. 1 ನೇ ಎದುರುದಾರರು ನನಗೆ ಸಂಬಂಧಿಕರಾಗಬೇಕು. ನನ್ನ ಮಗ ತೀರಿಕೊಳ್ಳುವ ಕಾಲಕ್ಕೆ ಸರ್ಕಾರಿ ಶಾಲೆಯಲ್ಲಿ 8 ನೇ ತರಗತಿ ವ್ಯಾಸಂಗ ಮಾಡುತ್ತಿದ್ದನು. ನನ್ನ ಕುಟುಂಬದ ನಿರ್ವಾಹಣೆಯನ್ನು ನಾನೇ ಮಾಡುತ್ತಿದ್ದೆ ಎಂದರೆ ಸರಿ. 2 ನೇ ಎದುರುದಾರರು ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅ ದಿನ 1 ನೇ ಎದುರುದಾರರ ಜೊತೆ ನನ್ನ ಮಗನನ್ನು ಬೈಕ್ ನಲ್ಲಿ ನಾನೇ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ನಾನು ನನ್ನ ಮಗನನ್ನು 1 ನೇ ಎದುರುದಾರರ ಜೊತೆ ಕಳುಹಿಸಿದ್ದರೂ ಸಹ ಕಳುಹಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಮಗನಿಗೆ ಹುಷಾರಿಲ್ಲದ ಕಾರಣ ನಾನು 1 ನೇ ಎದುರುದಾರರ ಜೊತೆ ಆಸ್ಪತ್ರೆಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಎದುರುದಾರರಿಗೆ ಗೊತ್ತಿಲ್ಲದ ರೀತಿ 1 ನೇ ಎದುರುದಾರರು ಅವರ ಬೈಕ್ ಅನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿ ಸತ್ಯವೇಲು ಅವರೇ ಅಣ್ಣಪ್ಪನ ಹೆಂಡತಿಗೆ ಹುಷಾರಿಲ್ಲ ಬೈಕನ್ನು ತೆಗೆದುಕೊಂಡು ಹೋಗು ಎಂದು ಹೇಳಿದ್ದರು ಎಂದು ಉತ್ತರಿಸುತ್ತಾರೆ. ಆ ಕಾಲಕ್ಕೆ ನಾನು ಕೊಪ್ಪದ ಸರ್ಕಾರಿ ಆಸ್ಪತ್ರೆಯಲ್ಲಿ ಇದ್ದೆನು. ಆ ಕಾಲಕ್ಕೆ ಸತ್ಯವೇಲು ಅವರು ಅಣ್ಣಪ್ಪನ ಹೆಂಡತಿ ಹೆರಿಗೆ ಆದ ಕಾರಣ ಅಲ್ಲಿಗೆ ಬಂದಿದ್ದರು. ಆ ಕಾಲಕ್ಕೆ ನನ್ನ ಮಗನೂ ಸಹ ಸರ್ಕಾರಿ ಆಸ್ಪತ್ರೆ ಕೊಪ್ಪದಲ್ಲಿ ಇದ್ದೆನು. ಆ ದಿನ ನನ್ನ ಮಗ ನನ್ನ ಜೊತೆ ಇದ್ದ ಕಾರಣ ಆತನು ನನಗೆ ಹೇಳಿ ಅಣ್ಣಪ್ಪನ ಜೊತೆ ಹೋಗಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮಗನ ಅಂತ್ಯ ಸಂಸ್ಕಾರಕ್ಕೆ ಸುಮಾರು ರೂ.1 ವರೆ ಲಕ್ಷ ಹಣ ಖರ್ಚು ಆಗಿರುತ್ತದೆ ಎಂದು ನಾನ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. 2 ನೇ ಎದುರುದಾರರಿಗೆ ತಮ್ಮ ಬೈಕನ್ನು ತೆಗೆದುಕೊಂಡು ಹೋಗುವ ವಿಚಾರ ಗೊತ್ತಿಲ್ಲದೇ ಇರುವ ಕಾರಣ ಅವರ ಪರಿಹಾರ ಕೊಡಲು ಬಾಧ್ಯಸ್ತರು ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರರು ಕೂಲಿ ಕೆಲಸ ಮಾಡುವ ಕಾರಣ ಅವರು ಪರಿಹಾರ ಕೊಡಲು ಬಾಧ್ಯಸ್ತರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 1 ನೇ ಎದುರುದಾರರು ಏಕ ಪಕ್ಷೀಯ ಇರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ

ಎಂ ವಿ ಸಿ ನಂಃ 184/2025
ಪಿ ಡಬ್ಲ್ಯುಃ 1